# Srinidhi Silks & Textiles

T.S.B. Cirlce, Nehru Road, Shivamogga.

ಶ್ರೀನಿಧಿ ಟೆಕ್ಸ್‌ಟೈಲ್ ವರ್ಲ್ಡ್

www.srinidhishimoga.com | ISO 9001 - 2008 Company | Phone : 08182-272939

## ಹಾರ್ದಿಕ ಅಭಿನಂದನೆಗಳು

12-01-2021

ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ
ಹಾಗೂ ಎಲ್ಲಾ ಪದಾಧಿಕಾರಿಗಳವರಿಗೆ,
ಟಿ.ಎಂ.ಎ.ಇ.ಎಸ್. ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ,
ಮಾಚೇನಹಳ್ಳಿ,
ಶಿವಮೊಗ್ಗ ಜಿಲ್ಲೆ.

ಮಾನ್ಯರೆ,

ಶಿವಮೊಗ್ಗ ಜಿಲ್ಲೆಯ ಪ್ರತಿಷ್ಠಿತ ಟಿ.ಎಂ.ಎ.ಇ.ಎಸ್. ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯ ಆಡಳಿತ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಿಗೆ ಹಾಗೂ ಎಲ್ಲಾ ಪದಾಧಿಕಾರಿಗಳವರಿಗೆ ಶಿವಮೊಗ್ಗದ ಶ್ರೀನಿಧಿ ಟೆಕ್ಸ್‌ಟೈಲ್ಸ್ ವರ್ಲ್ಡ್-ಶ್ರೀನಿಧಿ ಸಿಲ್ಕ್ಸ್ & ಟೆಕ್ಸ್‌ಟೈಲ್ಸ್ ಜವಳಿ ಉದ್ಯಮದವರ ವಂದನೆಗಳು ಅಭಿನಂದನೆಗಳು. ತಮಗೂ, ತಮ್ಮ ಕುಟುಂಬದವರೆಲ್ಲರಿಗೂ ಹೊಸವರ್ಷ 2021 ಹಾಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

ತಮ್ಮ ಸಾರಥ್ಯದಲ್ಲಿ ಟಿ.ಎಂ.ಎ.ಇ.ಎಸ್. ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯು ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಆಯುರ್ವೇದ ಶಿಕ್ಷಣ ಹಾಗೂ ಆಸ್ಪತ್ರೆಗೆ ರೋಗಿಗಳಿಗೆ ಉತ್ತಮ ಆಯುರ್ವೇದ ಚಿಕಿತ್ಸೆ, ಔಷಧಿಗಳನ್ನು ನೀಡುತ್ತ ಜನಪ್ರಿಯ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ. ಆಯುರ್ವೇದ ಕ್ಷೇತ್ರದಲ್ಲಿ ತಮ್ಮ ಕಾಲೇಜು ಹಾಗೂ ಆಸ್ಪತ್ರೆಯು ಸಲ್ಲಿಸುತ್ತಿರುವ ಗಣನೀಯ ಸೇವೆಯನ್ನು ಗುರುತಿಸಿ ಯೂತ್ ಎಫೋರ್ಟ್ಸ್ ಫಾರ್ ಸೊಸೈಟಿ ಟ್ರಸ್ಟ್ ನವರು ತಮ್ಮ ಕಾಲೇಜಿಗೆ "ಅತ್ಯುತ್ತಮ ಶಿಕ್ಷಣ ಸಂಸ್ಥೆ" ಪ್ರಶಸ್ತಿಯನ್ನು ನೀಡಿ ಗೌರವಿಸಿರುವ ವಿಷಯ ತಿಳಿದು ಬಹಳ ಸಂತೋಷವಾಯಿತು. ಈ ಶುಭ ಸಂದರ್ಭದಲ್ಲಿ ನಾವುಗಳು ತಮ್ಮೆಲ್ಲರನ್ನು ತುಂಬುಹೃದಯದಿಂದ ಅಭಿನಂದಿಸುತ್ತಿದ್ದೇವೆ.

ತಮ್ಮ ಸಂಸ್ಥೆಯ ಹಿಂದಿನ ಹಾಗೂ ಇಂದಿನ ವ್ಯವಸ್ಥಾಪಕ ನಿರ್ದೇಶಕರ ಹಾಗೂ ಎಲ್ಲಾ ಪದಾಧಿಕಾರಿಗಳ ನಿರಂತರ ಪರಿಶ್ರಮ, ಚಟುವಟಿಕೆ, ಇಚ್ಛಾಶಕ್ತಿ, ಕ್ರಿಯಾಶೀಲತೆ, ಕಾರ್ಯತತ್ಪರತೆ, ಕರ್ತವ್ಯನಿಷ್ಠೆ, ಸಾಮಾಜಿಕ ಕಳಕಳಿ, ಚಿಂತನಾಶಕ್ತಿ, ನಿಸ್ವಾರ್ಥ ಸೇವಾಭಾವನೆ, ಇವೆಲ್ಲದರಿಂದ ಟಿ.ಎಂ.ಎ.ಇ.ಎಸ್. ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯು ಉತ್ತಮ ಶಿಕ್ಷಣ ಹಾಗೂ ಚಿಕಿತ್ಸೆಯನ್ನು ನೀಡುತ್ತ ಜನಾನುರಾಗಿಯಾಗಿ ಮುನ್ನಡೆಯುತ್ತಿರುವುದು ಪ್ರಶಂಸನೀಯ. ಇದಕ್ಕೆ ಪೂರಕವಾಗಿ ತಮ್ಮ ಸಂಸ್ಥೆಗೆ ಇಂದು "ಅತ್ಯುತ್ತಮ ಶಿಕ್ಷಣ ಸಂಸ್ಥೆ" ಎಂಬ ಪ್ರಶಸ್ತಿ ಲಭಿಸಿರುವುದು ಅಭಿನಂದನೀಯ. ಈ ಕ್ಷೇತ್ರದಲ್ಲಿ ತಮ್ಮೆಲ್ಲರ ಅಮೂಲ್ಯ ಸೇವೆ ಹಾಗೂ ಅಮೋಘ ಸಾಧನೆಗೆ ನಾವೆಲ್ಲರೂ ಬಹಳ ಹೆಮ್ಮೆ ಪಡುತ್ತೇವೆ.

ತಮ್ಮ ಆಡಳಿತದಲ್ಲಿ ಮುಂದಿನ ದಿನಗಳಲ್ಲಿ ತಮ್ಮ ಸಂಸ್ಥೆಯು ನಿರಂತರವಾಗಿ ಉತ್ತಮ ಸೇವೆ ಸಲ್ಲಿಸುತ್ತ ರಾಷ್ಟ್ರ ಮಟ್ಟದಲ್ಲಿ ಖ್ಯಾತಿ ಗಳಿಸಿ, ಇನ್ನೂ ಉನ್ನತವಾದ ಪ್ರಶಸ್ತಿ ಪುರಸ್ಕಾರಗಳು ಲಭಿಸುವಂತಾಗಲಿ, ತಮಗೆಲ್ಲರಿಗೂ ಇನ್ನೂ ಎತ್ತರದ ಹುದ್ದೆ ಪದವಿಗಳು ಲಭಿಸಲಿ, ಸಂಸ್ಥೆಯ ಸಕಲ ಆಶೋತ್ತರಗಳು ಸಾಕಾರಗೊಳ್ಳಲಿ ಎಂದು ಹಾರೈಸುತ್ತ, ದಯಾಮಯನಾದ ಪರಮಾತ್ಮನು ತಮಗೆಲ್ಲರಿಗೂ ಆಯುರಾರೋಗ್ಯ ಐಶ್ವರ್ಯವನ್ನು ವೃದ್ಧಿಸಲೆಂದು ಪ್ರಾರ್ಥಿಸುತ್ತ, ಮತ್ತೊಮ್ಮೆ ತಮ್ಮೆಲ್ಲರನ್ನೂ ಅಭಿನಂದಿಸುತ್ತಿದ್ದೇವೆ. ವಿಶ್ವಾಸವಿರಲಿ.

ಅಭಿನಂದನೆಗಳೊಂದಿಗೆ <**> ತಮ್ಮೆಲ್ಲರ ವಿಶ್ವಾಸಿಗಳು,
ಶ್ರೀನಿಧಿ ಟೆಕ್ಸ್‌ಟೈಲ್ಸ್ ವರ್ಲ್ಡ್-ಶ್ರೀನಿಧಿ ಸಿಲ್ಕ್ಸ್ & ಟೆಕ್ಸ್‌ಟೈಲ್ಸ್, ಶಿವಮೊಗ್ಗ.
ಮೊಬೈಲ್ : 9590111711